## ಸ್ವಯಂಪ್ರೇರಿತರಾಗಿ...

ಜಾತಿ, ಧರ್ಮ ಅಥವಾ ಯಾವುದೇ ಭೇದ ಭಾವವಿಲ್ಲದೆ ಜನರು ತಮ್ಮ ಶಕ್ತಿಯ ಅನುಸಾರ ಸ್ವಯಂಪ್ರೇರಿತರಾಗಿ ದವಸ–ಧಾನ್ಯವನ್ನು ತಂದುಕೊಡುತ್ತಾರೆ. ಮೈಸೂರು, ಚಾಮರಾಜನಗರ, ಮಂಡ್ಯ ಮೊದಲಾದ ಜಿಲ್ಲೆಗಳ ರೈತರು ಹಾಗೂ ವ್ಯಾಪಾರಿಗಳು ದಿನಸಿ, ತೆಂಗಿನಕಾಯಿ ಮತ್ತು ತರಕಾರಿಗಳನ್ನು ದಾಸೋಹಕ್ಕೆ ಸಮರ್ಪಿಸುತ್ತಾರೆ. ಪ್ರಸಾದ ವಿತರಿಸಲು ಸ್ವಯಂಸೇವಕರೊಂದಿಗೆ ಹಲವು ಗ್ರಾಮಗಳ ಯುವಕರು ಹಾಗೂ ಮಹಿಳೆಯರು ಕೂಡ ಪಾಲ್ಗೊಳ್ಳುತ್ತಾರೆ.



ಸುತ್ತೂರು ಜಾತ್ರೆ ಅಂಗವಾಗಿ ನಡೆಯುವ ಗಾಳಿಪಟ ಉತ್ಸವ

ಕೊಡುಗೆ, ಕೃಷಿಯ ಲೋಕ, ನಾಡಿನ ಸಾಧನೆಯ ಅನಾವರಣ ಮೊದಲಾದವುಗಳ 'ಮೆರವಣಿಗೆ' ನಡೆಯುತ್ತದೆ. ಶಿವರಾತ್ರೀಶ್ವರ ಶಿವಯೋಗಿಗಳ ಧೀಶಕ್ತಿಯೊಂದಿಗೆ ಈಗಿನ ಪೀಠಾಧಿಪತಿ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಉತ್ಸವ ತೆರೆದುಕೊಳ್ಳಲಿದೆ. ಮಠದ ಪರಂಪರೆಯನ್ನು ಸ್ಮರಿಸುವ ಜೊತೆಗೆ ನಾಡಿನ ಶ್ರೀಮಂತ ಕಲೆ, ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಕಾರ್ಯವನ್ನು ಈ ಜಾತ್ರೆ ಮಾಡುತ್ತಿದೆ. ಜನಜಾಗೃತಿ ಯಾತ್ರೆಯಾಗಿಯೂ ರೂಪುಗೊಂಡಿದೆ. ಜ್ಞಾನದಾಸೋಹದ ತೇರಾಗಿಯೂ ಸಾಗುತ್ತಿದೆ.

ವಸ್ತುಪ್ರದರ್ಶನ, ಕೃಷಿ ಮೇಳ, ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣೆ ಶಿಬಿರ, ದೋಣಿ ವಿಹಾರ, ಸಾಮೂಹಿಕ ವಿವಾಹ, ಹಾಲರವಿ ಉತ್ಸವ, ರಥೋತ್ಸವ, ವೀರಭದ್ರೇಶ್ವರ ಕೊಂಡೋತ್ಸವ, ಮಹದೇಶ್ವರ ಕೊಂಡೋತ್ಸವ, ಲಕ್ಷದೀಪೋತ್ಸವ, ತೆಪ್ಪೋತ್ಸವ, ವೈವಿಧ್ಯಮಯ ಸಾಂಸ್ಕೃತಿಕ, ಶೈಕಣಿಕ ಹಾಗೂ ಕ್ರೀಡಾ ಚಟುವಟಿಕೆಗಳು ನಡೆಯುತ್ತವೆ. ಇವುಗಳಿಗೆ ನಾಡಿನ ಹಾಗೂ ಹೊರ ರಾಜ್ಯಗಳ ವಿವಿಧ ಮಠಾಧೀಶರು, ಜನಪ್ರತಿನಿಧಿಗಳು ಹಾಗೂ ಗಣ್ಯರು ಸಾಕ್ಷಿಯಾಗುತ್ತಾರೆ. ಇಲ್ಲಿ ಮಕ್ಕಳಿಗೂ ಪಾಠವುಂಟು, ಕೃಷಿಕರಿಗೂ ಮಾರ್ಗದರ್ಶನ ಉಂಟು. ಎಲ್ಲ ಪಕ್ಷಗಳ ರಾಜಕೀಯ ನಾಯಕರ ಸಮ್ಮಿಲನವೂ ಹೌದು, ಪ್ರಮುಖ ಪೀಠಗಳ ಮಠಾಧಿಪತಿಗಳ 'ಗೋಷ್ಠಿ'ಯೂ ಹೌದು.

### ಮಾನ್ಯತೆ ದೊರೆತ ನಂತರ...

ಸುತ್ತೂರು ಶ್ರೀಕ್ಷೇತ್ರಕ್ಕೆ ಪ್ರವಾಸಿ ತಾಣ ಮಾನ್ಯತೆಯ ಮುದ್ರೆ ಬಿದ್ದ ನಂತರ ನಡೆಯುತ್ತಿರುವ ಜಾತ್ರೆಯ ಕಳೆ ಹೆಚ್ಚಾಗಲಿದೆ. ರಾಜ್ಯ ಸರ್ಕಾರವು 2024–29ನೇ ಪ್ರವಾಸೋದ್ಯಮ ನೀತಿಯ ಅಡಿಯಲ್ಲಿ ಜಿಲ್ಲಾವಾರು ಪ್ರವಾಸಿ ತಾಣಗಳಿಗೆ ಅನುಮೋದನೆ ನೀಡಿದ್ದು, ಇದರಲ್ಲಿ ಜಿಲ್ಲೆಯ ಸುತ್ತೂರು ಶ್ರೀಕ್ಷೇತ್ರವೂ ಸೇರಿಸಲಾಗಿದೆ. ಇಲ್ಲಿಗೆ ವರ್ಷವಿಡೀ ಭಕ್ತರು ಭೇಟಿ ನೀಡುತ್ತಾರೆ. ಇದನ್ನು ಪರಿಗಣಿಸಿ ಪ್ರವಾಸಿ ತಾಣದ ಮಾನ್ಯತೆಯನ್ನು ಸರ್ಕಾರ ನೀಡಿದೆ.

## ಹಲವು ಕಾರ್ಯಕ್ರಮ...

ಭಜನಾ ಮೇಳ, ಕೃಷಿ ವಿಚಾರಸಂಕಿರಣ, ಚಿತ್ರಸಂತೆ, ಕುಸ್ತಿ ಪಂದ್ಯಗಳು, ದೇಸಿ ಆಟಗಳು, ದನಗಳ ಪರಿಷೆ, ಕಪಿಲಾರತಿ, ನಾಟಕೋತ್ಸವ ಮೊದಲಾದವು ಮೆರುಗು ಹೆಚ್ಚಿಸುತ್ತವೆ. ರಾತ್ರಿ ವೇಳೆಯಲ್ಲಿ ಪೌರಾಣಿಕ ನಾಟಕಗಳೂ ನಡೆಯುವುದು ಇಲ್ಲಿನ ವಿಶೇಷ. ಈ ಬಾರಿಯೂ 20 ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಸಾಮೂಹಿಕ ವಿವಾಹದಲ್ಲಿ ಅಂತರ್ಜಾತಿ ಹಾಗೂ ಅಂತರ್‌ಧರ್ಮೀಯ ವಿವಾಹಕ್ಕೂ ಪ್ರೋತ್ಸಾಹ ನೀಡುತ್ತಾ ಬಂದಿರುವುದು ಸುತ್ತೂರು ಮಠದ ವೈಶಾಲ್ಯದ ಹಿರಿಮೆಗೆ ಕನ್ನಡಿಯಾಗಿದೆ. ರಾಜ್ಯಮಟ್ಟದ ಭಜನಾ ಮೇಳ, ದೇಸಿ ಆಟಗಳು, ಸೋಬಾನೆ ಪದ, ರಂಗೋಲಿ ಸ್ಪರ್ಧೆ ಮೊದಲಾದವುಗಳ ಮೂಲಕ ನಮ್ಮ ನೆಲದ ಸಂಸ್ಕೃತಿಯನ್ನು ಮರೆಯದಂತೆ ನೆನಪಿಸುವ ಕೆಲಸವನ್ನು ಮಹೋತ್ಸವದ ಮೂಲಕ ಮಾಡಲಾಗುತ್ತಿದೆ.

ಜಾತ್ರೆ ಎಂದರೆ ಮನರಂಜನೆಯಷ್ಟೇ ಅಲ್ಲ ಎಂಬುದನ್ನು ತಿಳಿಸಿಕೊಡುವುದಕ್ಕಾಗಿ ಎಲ್ಲ ಜಾತಿ, ಅಂತರ್‌ಧರ್ಮೀಯರಿಗೆ ವಿವಾಹವಾಗಲು ಅವಕಾಶ ಕಲ್ಪಿಸುವ ಮೂಲಕ ವೈಚಾರಿಕ ಕ್ರಾಂತಿಯನ್ನೂ ಈ ಜಾತ್ರಾ ಮಹೋತ್ಸವದಲ್ಲಿ ಮಾಡಲಾಗುತ್ತಿದೆ. ಪಾಲ್ಗೊಳ್ಳುವವರಿಗೆ ಜ್ಞಾನದ ಪರಿಧಿ ವಿಸ್ತರಿಸಿಕೊಳ್ಳಲು ಸಹಕಾರಿ ಆಗುವಂತೆ ವೈವಿಧ್ಯಮಯ ವಿಷಯಗಳ ಗೋಷ್ಠಿಗಳು ನಡೆಯುತ್ತವೆ. ಮಹೋತ್ಸವದ ವೈಭವಕ್ಕೆ ಕಳಶಪ್ರಾಯವೆಂದರೆ ರಥೋತ್ಸವ. ಇಲ್ಲಿ ರಾಜ್ಯ ಹಾಗೂ ಹೊರರಾಜ್ಯಗಳ ಜಾನಪದ ಕಲಾತಂಡಗಳ ಕಲಾವಿದರು ಮೆರುಗು ತುಂಬುತ್ತಾರೆ. ಭಕ್ತರ ಜಯಘೋಷದ ನಡುವೆ ರಥೋತ್ಸವದ ಮೆರವಣಿಗೆಯು ಸಹಸ್ರಾರು ಮಂದಿಯನ್ನು ಸೆಳೆಯುತ್ತದೆ. ನಂದಿಧ್ವಜ ಕುಣಿತ ರಥದ ಮುಂಭಾಗದಲ್ಲಿದ್ದರೆ, ನಗಾರಿಯ ಸದ್ದಿಗೆ ಕಂಬದ ಗೆಜ್ಜೆಗಳನ್ನು ಝುಲ್ಲೆನಿಸುತ್ತಾ ಹೆಜ್ಜೆ ಹಾಕಿದ ಕಲಾವಿದರು ರಥೋತ್ಸವದ ಮೆರವಣಿಗೆಗೆ ಮುನ್ನುಡಿ ಬರೆಯುತ್ತಾರೆ. ವೀರಭದ್ರ ಕುಣಿತ, ನಾದಸ್ವರ, ಪೂಜಾಕುಣಿತ, ಗಾರುಡಿ ಗೊಂಬೆಗಳು ಆಕರ್ಷಿಸಿದರೆ, ಡೊಳ್ಳು ಕುಣಿತದ ಸದ್ದು ಧಿಮಿಧಿಮಿಸುತ್ತದೆ.

'ಜನರ ಸರ್ವಾಂಗೀಣ ಪ್ರಗತಿಗೆ ಪೂರಕವಾದ ಹಲವು ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿರುವುದು ಜಾತ್ರಾ ಮಹೋತ್ಸವದ ಪ್ರಮುಖ ಆಶಯವಾಗಿದೆ. ಅಪಾರ ಭಕ್ತರು, ಸೇವಾರ್ಥದಾರರು, ಸಾರ್ವಜನಿಕರು, ಸಂಘ–ಸಂಸ್ಥೆಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಇಲಾಖೆಗಳ ಸಹಾಯ–ಸಹಕಾರದಿಂದ ಮುಂದುವರಿಯುತ್ತದೆ. ಹಲವು ತಿಂಗಳಿಂದಲೂ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ' ಎಂದು ತಿಳಿಸುತ್ತಾರೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್.



ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಕಡಿಮೆ ನೀರು ಬಳಸಿ ಕೃಷಿಯನ್ನು ಲಾಭದಾಯಕ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಸಿಕೊಡುವ ಪ್ರಾತ್ಯಕ್ಷಿಕೆ ಒಳಗೊಂಡ ಕೃಷಿ ಮೇಳ 'ಕೃಷಿ ಬ್ರಹ್ಮಾಂಡ' ರೈತರಿಗೆ ತಾಂತ್ರಿಕತೆ ಅಳವಡಿಕೆಯ ಸಲಹೆಯನ್ನು ನೀಡುತ್ತದೆ. ಕೃಷಿ ಪರಿಕರಗಳ ವಸ್ತುಪ್ರದರ್ಶನವೂ ಇರಲಿದೆ. ಉಚಿತವಾಗಿ ಆರೋಗ್ಯ ತಪಾಸಣೆಯೂ ಇರುತ್ತದೆ.

ಮಠದ ಭಾಗವಾಗಿರುವ ಜೆಎಸ್‌ಎಸ್ ಮಹಾವಿದ್ಯಾಪೀಠದ ಅಂಗಸಂಸ್ಥೆಗಳಲ್ಲಿನ ಸಿಬ್ಬಂದಿ, ನೌಕರರು, ಅಧಿಕಾರಿಗಳು, ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಜಾತ್ರೆಗೆ ಯಶಸ್ಸಿಗೆ ಸರದಿಯಲ್ಲಿ ದುಡಿಯುತ್ತಾರೆ. ಜಾತ್ರೆಗೆ ಕಳೆ ತುಂಬುತ್ತಾರೆ. ಪ್ರತಿಭೆಗಳಿಗೆ ವೇದಿಕೆಯನ್ನೂ ಒದಗಿಸಲಾಗುತ್ತದೆ. ■